## 66. ಕೇಂದ್ರದ ಆತ್ಮನಿರ್ಭರ ಭಾರತ ಪ್ಯಾಕೇಜ್: 'ಸರ್ವರಿಗೂ ಪಾಲು'

ಕೇಂದ್ರ ಸರ್ಕಾರದ ಆತ್ಮನಿರ್ಭರ ಭಾರತ ಪ್ಯಾಕೇಜ್‌ನ ಎರಡನೇ ಘೋಷಣೆಯಲ್ಲಿ ವಲಸೆ ಕಾರ್ಮಿಕರು, ಕೂಲಿ ಕಾರ್ಮಿಕರು ಹಾಗೂ ಮೂಲ ಸೌಕರ್ಯ ಕಾರ್ಯಕ್ರಮಕ್ಕೆ ಅವಕಾಶ ಸಿಕ್ಕಿದೆ ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ. ರಾಜ್ಯ ಮತ್ತು ಕೇಂದ್ರದ ನಡುವೆ ಇರುವ ಕನಿಷ್ಠ ವೇತನ ತಾರತಮ್ಯ ನಿವಾರಣೆಯಾಗಿದೆ. ಇದರಿಂದ ಊರುಗಳಿಗೆ ವಾಪಸ್ಸು ಆಗಿರುವ ವಲಸೆ ಕಾರ್ಮಿಕರಿಗೆ ವರದಾನವಾಗಲಿದೆ. 8 ಕೋಟಿ ಪಡಿತರ ಇಲ್ಲದಿರುವ ಕಾರ್ಮಿಕರಿಗೆ ರೂ.3,500 ಕೋಟಿ ವೆಚ್ಚದಲ್ಲಿ ಎರಡು ತಿಂಗಳ ಉಚಿತ ಪಡಿತರ ನೀಡುವುದಾಗಿ ಘೋಷಣೆ ಮಾಡಲಾಗಿದೆ. ರಾಜ್ಯ ಸರ್ಕಾರದಿಂದ ಎರಡು ತಿಂಗಳು ಪಡಿತರ ನೀಡಿದ್ದೇವೆ. ಕೇಂದ್ರ ಕೂಡ ಎರಡು ತಿಂಗಳು ವಿಸ್ತರಿಸಿದೆ. ಇದರಿಂದ ಕನಿಷ್ಠ 6 ತಿಂಗಳ ಪಡಿತರ ನೀಡಿದಂತಾಗಿದ್ದು, ಕೆಳ ವರ್ಗದ ಜನರು ನೆಮ್ಮದಿಯಿಂದ ಜೀವನ ನಡೆಸಲು ಅನುಕೂಲವಾದಂತಾಗಿದೆ ಎಂದರು.

ಬೀದಿ ಬದಿ ವ್ಯಾಪಾರಿಗಳಿಗೆ 10 ಸಾವಿರ ಪ್ರೋತ್ಸಾಹಧನ ನೀಡಲು ರೂ.5 ಸಾವಿರ ಕೋಟಿ ಘೋಷಣೆ ಮಾಡಿರುವುದರಿಂದ ಆ ಸಮುದಾಯಕ್ಕೆ ಹೆಚ್ಚಿನ ಅನುಕೂಲವಾಗಲಿದೆ. ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದ ಜನರಿಗೆ ಗೃಹ ಸಾಲ ಸಬ್ಸಿಡಿ ನೀಡಲು ರೂ.70 ಸಾವಿರ ಕೋಟಿ ಘೋಷಣೆ ಮಾಡಿರುವುದು ಈ ವರ್ಗದ ಜನರ ಕನಸು ನನಸು ಮಾಡಿದಂತಾಗಿದೆ. ರೈತ ನಿಧಿಗೆ ರೂ.30 ಸಾವಿರ ಕೋಟಿ ಹಣ ನೀಡಲಾಗಿದೆ.

ರಾಜ್ಯ ಸರ್ಕಾರ, ತರಕಾರಿ, ಹಣ್ಣು ಬೆಳೆದವರಿಗೆ ಪರಿಹಾರಕ್ಕಾಗಿ ರೂ.137 ಕೋಟಿ ಪ್ಯಾಕೇಜ್ ಘೋಷಿಸಿದ್ದೇವೆ. ಪವರ್ ಲೂಮ್ಸ್‌ನಲ್ಲಿ ಕೆಲಸ ಮಾಡುವವರಿಗೆ ರೂ.2 ಸಾವಿರ ಸೇರಿ ಒಟ್ಟು ರೂ.165 ಕೋಟಿ ಘೋಷಣೆ ಮಾಡಿದ್ದೇವೆ ಎಂದು ಹೇಳಿದರು.

ಆಧಾರ:ಉದಯವಾಣಿ, ದಿನಾಂಕ:15.05.2020